ನನ್ನ ತಂಟೆಗೆ ಬರಲಿಲ್ಲ! ಮುಂದೆ ನಾನು ಹತ್ತಾರು ಊರುಗಳ ಕೆರೆನೀರು ಕುಡಿಯಬೇಕಾಯಿತು. ಆಕಸ್ಮಿಕವೋ ಎನ್ನುವಂತೆ ಈ ಸಲ ನನಗೆ ಹಿಂದೆ ತಂದೆಯೊಂದಿಗೆ ಕಳೆದಿದ್ದ ಆ ಪುಟ್ಟ ತಾಲೂಕಿಗೆ ವರ್ಗವಾಯಿತು. ಆ ಊರಿನಲ್ಲಿದ್ದ ಕಿರಿದಾದ ಪೊಲೀಸ್ ಕ್ವಾರ್ಟರ್ಸ್ ನನಗೆ ಮತ್ತು ನನ್ನ ಓದಿನ ಪುಸ್ತಕಗಳಿಗೆ ಸಾಕಾಗುತ್ತಿತ್ತು. ಉತ್ತರ ದಿಕ್ಕಿಗಿದ್ದ ಬೆಟ್ಟಸಾಲುಗಳ ಕಿಬ್ಬಿಯಲ್ಲಿ ಮುದುಡಿ ಮಲಗಿದ್ದ ಊರು ಅದು. ಬೇಸಗೆಯಲ್ಲಂತೂ ಊರು ಕಾದ ಹೆಂಚಿನಂತಾಗುತ್ತಿತ್ತು. ಅಷ್ಟೇನೂ ಯೋಜಿತವಲ್ಲದ ಇಕ್ಕಟ್ಟಾದ ಕೇರಿಗಳಲ್ಲಿ ಒಂದೇ ಸಮನೆ ಕೇಳಿಬರುವ ಕೈಮಗ್ಗಗಳ ಉಬ್ಬರವಿಳಿತದ ಶಬ್ದ. ಸತತವಾಗಿ ಕಿವಿತುಂಬುವ ತೆಲುಗು ಮತ್ತು ಕನ್ನಡ ಭಾಷೆ. ಬೀದಿಯ ಎರಡೂ ಸಾಲುಗಳಲ್ಲಿ ಇರುತ್ತಿದ್ದ ಹೂವು ಮತ್ತು ಹಣ್ಣಿನಂಗಡಿಗಳು, ಮಂಕರಿಯಲ್ಲಿ ತರಕಾರಿ ಹೊತ್ತು ಮನೆ ಮನೆಗೆ ಬರುವ ಮಹಿಳೆಯರು, 'ಹಾಲು' ಎಂದು ಕೂಗುತ್ತಾ ಬೀದಿಯಲ್ಲಿ ಬರುವ ಹೆಂಗಳೆಯರು, ಯಾವಾಗಲೂ ದೂಳುಮಯವಾಗಿದ್ದ ರಸ್ತೆಗಳು, ಕೈಕಾಲಿಗೆ ತೊಡರುವ ವಾಹನಗಳು, ಬಿಸಿಲು ಮತ್ತು ಗಾಳಿಗೆ ಒಣಗಿ ಲಡ್ಡಾಗಿದ್ದ ಅಲ್ಲಿನ ಬಸ್ ಸ್ಟ್ಯಾಂಡ್ ಹೀಗೆ ಈ ಊರು ಅಂದವಲ್ಲದ ಆಕಾರ ಪಡೆದಿತ್ತು.

ನಮ್ಮ ತಂದೆ ಶಿಕ್ಷಕರಾಗಿದ್ದ ಶಾಲೆ ಮತ್ತು ನಾನು ಓದಿದ ಶಾಲೆಯನ್ನು ನೋಡಿದೆ. ಸುಣ್ಣ-ಬಣ್ಣವಿಲ್ಲದ ಆ ಕಟ್ಟಡಗಳು ಈಗಲೂ ಹಾಗೆಯೇ ಇದ್ದವು. ದಿನ ಕಳೆದಂತೆ ನಾನು ಈ ಎಲ್ಲ ವೈವಿಧ್ಯಮಯ ದೃಶ್ಯಗಳ ಒಂದು ಭಾಗವಾದೆ. ಹಿಂದೆ ನಮ್ಮ ಕುಟುಂಬ ವಾಸಮಾಡುತ್ತಿದ್ದ ಮನೆಯನ್ನು ನೋಡಲು ಅಲ್ಲಿಗೆ ಹೋದೆ. ಈಗ ಅದರ ಜಾಗದಲ್ಲಿ ನೋಡಲು ಸುಂದರವಾದ ಒಂದು ಮನೆ ಎದ್ದಿತ್ತು. ಉಳಿದಿದ್ದೆಲ್ಲವೂ ಅಂದಿನಂತೆಯೇ. ಜಯರಾಮ ದಿನವೂ ನಡೆದುಬರುತ್ತಿದ್ದ ಆ ದಾರಿಯನ್ನೂ ಒಮ್ಮೆ ಪ್ರೇಮದಿಂದ ಹಿಂದಿರುಗಿ ನೋಡಿದೆ. ಅದು ಈಗಲೂ ಖಾಲಿಯಾಗಿತ್ತು.

ಒಂದು ಮಧ್ಯಾಹ್ನದ ನಂತರ ಸ್ಟೇಷನ್‌ನಲ್ಲಿ ಕುಳಿತಿದ್ದೆ. ಹಿಂದಿನ ದಿನ ಕಂಪಳರಂಗನ ಜಾತ್ರೆಯಲ್ಲಿ ಪಂಜಿನ ಸೇವೆ ನಡೆದಿದ್ದರಿಂದ ಇಡೀ ರಾತ್ರಿ ನನ್ನ ಸಿಬ್ಬಂದಿಯವರೊಂದಿಗೆ ಕರ್ತವ್ಯದಲ್ಲಿದ್ದೆ. ಹೀಗಾಗಿ ಕಣ್ಣುಗಳು ನಿದ್ದೆಗೆ ಜೋತು ಬೀಳುತ್ತಿದ್ದವು. ಹಿಂದಿನ ದಿನ ಕಂಪಳರಂಗನ ಪರಿಸೆಯಲ್ಲಿ ಪಂಜಿನ ಸೇವೆ ನಡೆಯುವ ಮುಂಚೆ ಎತ್ತಿನ ಕಿಲಾರಿಗಳು ದೇವರ ಎತ್ತುಗಳನ್ನು ಓಡಿಸಿಕೊಂಡು ಬರುತ್ತಿದ್ದರು. ಅವರು 'ಅಲೋಲೋ, ಕಲೋಲೋ' ಎಂದು ಕೈಯಲ್ಲಿ ದೊಣ್ಣೆ ಹಿಡಿದು ಅಬ್ಬರಿಸುತ್ತಾ ದೇವರ ಎತ್ತುಗಳನ್ನು ಅಟ್ಟಿಸಿಕೊಂಡು ಬರುತ್ತಿದ್ದರು. ಆ ಎತ್ತುಗಳು ದಡಗುಟ್ಟಿಕೊಂಡು ವೇಗವಾಗಿ ಬರುತ್ತಿದ್ದ ರಭಸಕ್ಕೆ ದೂಳು ಮೇಲೆದ್ದು ಇಡೀ ವಾತಾವರಣ ಮಣ್ಣಿನ ಹುಡಿಯಿಂದ ತುಂಬಿಹೋಯಿತು. ಇದೇ ಸಮಯದಲ್ಲಿ ತಾಯಿಯೊಬ್ಬಳ ಕಂಕುಳುನಿಂದ ಜಾರಿದ ಕೂಸೊಂದು ತೊಪ್ಪೆ ತೊಪ್ಪೆ ಹೆಜ್ಜೆಗಳನ್ನು ಇಡುತ್ತಾ ದೂಳೆಬ್ಬಿಸಿಕೊಂಡು ಬರುತ್ತಿದ್ದ ದೇವರ ಎತ್ತುಗಳ ಮುಂದೆ ಬಂದು ನಿಂತುಬಿಟ್ಟಿತು. ಇನ್ನು ಕೆಲವೇ ಕ್ಷಣದಲ್ಲಿ ಆ ಕೂಸು ಎತ್ತುಗಳ ಕಾಲುಗಳಿಗೆ ಸಿಲುಕಬೇಕು ಎನ್ನುವುದರೊಳಗೆ, ಅಲ್ಲೇ ಇದ್ದ ನಾನು ಕಣ್ಣುಮುಚ್ಚಿ ತೆರೆಯುವುದರೊಳಗಾಗಿ ಧಾವಿಸಿ ಮಗುವನ್ನು ಬರಸೆಳೆದು ಎದೆಗವಿಸಿಕೊಂಡೆ. ಘಟಿಸಬಹುದಾಗಿದ್ದ ದೊಡ್ಡ ಅನಾಹುತವೊಂದು ಹೇಗೋ ತಪ್ಪಿತು. ಜನರೆಲ್ಲಾ ದಿಗ್ಭ್ರಾಂತರಾಗಿ ನಿಂತಿದ್ದರು. ಮಗುವಿನ ಈ ಅಪ್ಪುಗೆಯ ಹಿತವನ್ನು ಕಳೆದುಕೊಳ್ಳಬಾರದು ಎಂದು ಹಾಗೆಯೇ ಕಣ್ಣುಮುಚ್ಚಿ ಕೆಲಹೊತ್ತು ಕುಳಿತಿದ್ದೆ. ಅಷ್ಟುಹೊತ್ತಿಗೆ ಎಲ್ಲೋ ಇದ್ದ ಮಗುವಿನ ತಾಯಿ ಓಡೋಡಿ ಬಂದು ನನ್ನ ತೆಕ್ಕೆಯಲ್ಲಿದ್ದ ಮಗುವನ್ನು ಬಾಚಿಕೊಂಡು ಮಡಿಲಿಗೆ ತುಂಬಿಕೊಂಡಳು. ಅವಳ ಕಣ್ಣುಗಳಲ್ಲಿ ನೀರು ಸುರಿಯುತ್ತಿತ್ತು. ನನ್ನ ಕಣ್ಣುಗಳೂ ಅವಳ ಕಣ್ಣುಗಳಂತಾದವು. ಕ್ಷಣಕಾಲ ಆ ಮಗುವಿನ ಅಪ್ಪುಗೆಯಿಂದ ನನ್ನೆದೆ ತಣ್ಣಗಾಯಿತು.

ನೆನ್ನೆ ಆದ ದೇಹಾಯಾಸದಿಂದ ದಣಿದ ನನ್ನ ಕಣ್ಣುಗಳು ಮುಚ್ಚಿಕೊಂಡವು.

ಹೊರಗೆ ಬಂಡೆಗಳ ಮೇಲೆ ಬಿದ್ದ ಬಿಸಿಲು ಊರನ್ನು ಸುಡುತ್ತಿತ್ತು. ಬಿಸಿಲಿನ ಝಳಕ್ಕೆ ಫ್ಯಾನ್ ಗಾಳಿಯೂ ಬಿಸಿಯಾಗಿತ್ತು. ಅಷ್ಟರಲ್ಲಿ ಬೂಟಿನ ಲಯಬದ್ಧ ಶಬ್ದ ನನ್ನನ್ನು ಎಚ್ಚರಗೊಳಿಸಿತು. ನನ್ನ ಸಹೋದ್ಯೋಗಿಗಳಾಗಿದ್ದ ನೇಮಯ್ಯ ಮತ್ತು ಕೃಷ್ಣಪ್ಪ ಒಬ್ಬ ಆರೋಪಿಯನ್ನು ಸ್ಟೇಷನ್‌ಗೆ ಎಳೆದುತಂದರು. ಆರೋಪಿಯನ್ನು ಒಮ್ಮೆ ಸೂಕ್ಷ್ಮವಾಗಿ ನೋಡಿದೆ. ಕೆದರಿದ ತಲೆಗೂದಲು, ಒಪ್ಪವಿಲ್ಲದ ಬಟ್ಟೆ, ಚಪ್ಪಲಿ